**<u>ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ. ಆರ್ ವಿ ಕೆ ವಕೀಲರಿಂದಃ-</u>**

1. ನಾನು ಬಿಕಾಂ ವರೆಗೂ ಓದಿರುತ್ತೇನೆ. ಯಾವುದೇ ಆಸ್ತಿಯನ್ನು ಖರೀದಿ ಮಾಡಬೇಕಾದರೆ ಖರೀದಿ ಮಾಡುವ ಪೂರ್ವದಲ್ಲಿ ಆಸ್ತಿಯ ದಾಖಲೆಗಳನ್ನು ಪರಿಶೀಲಿಸಿ ನೋಡಬೇಕಾಗುತ್ತದೆ ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಮಂಗಳವಾರ ಪೇಟೆ ಗ್ರಾಮದ ಸರ್ವೇ ನಂ.542ರ ಸ್ವತ್ತಾಗಿತ್ತು ಎಂದರೆ ಸರಿ. 1 ಎಕರೆ 24 ಗುಂಟೆ ಸ.ನಂ.542ರಲ್ಲಿ ಮೂಲ ಖಾತೆದಾರರ ಚಿಕ್ಕ ಎಲಗಯ್ಯ ರವರ ಹೆಸರಿಗೆ ಖಾತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ 24 ಗುಂಟೆ ಜಮೀನಿಗೆ ಚಿಕ್ಕ ಎಲಗಯ್ಯ ಗೇಣಿ ಖಾತೆದಾರ ಆಗಿದ್ದ ವಿಚಾರ ತಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ಸದರಿ ಚಿಕ್ಕಎಲಗಯ್ಯ ರವರಿಂದ 1970ರಲ್ಲಿ 1 ಎಕರೆ 24 ಗುಂಟೆ ಪೈಕಿ ಪ್ರತಿವಾದಿ 1 ರಿಂದ 3ರವರ ತಂದೆ ಸದರಿ ವಿಸ್ತೀರ್ಣದ ಆಸ್ತಿಯ ಪೂರ್ವ ದಿಕ್ಕಿಗೆ 15 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿ.

2. ಸದರಿ ಸನಂ.542ರಲ್ಲಿ ಪ್ರತಿವಾದಿ 1 ರಿಂದ 3 ರವರ ತಂದೆ ವೆಂಕಟದಾಸಯ್ಯರವರಿಗೆ ಭೂ ನ್ಯಾಯ ಮಂಡಳಿಯಿಂದ 1 ಎಕರೆ 09 ಗುಂಟೆ ಜಮೀನು ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸ ನಂ.542ರ ವಿಸ್ತೀರ್ಣ 1 ಎಕರೆ 24 ಗುಂಟೆ ಜಮೀನು 1 ರಿಂದ 3ನೇ ಪ್ರತಿವಾದಿ ತಂದೆ ವೆಂಕಟದಾಸಯ್ಯನ ಹೆಸರಿಗೆ ಖಾತೆ ಬರುತ್ತಿತ್ತು ಎಂದರೆ ಸರಿ. ವೆಂಕಟದಾಸಯ್ಯನ ಮರಣ ಹೊಂದಿದ ನಂತರ ಆತನ ಹೆಂಡತಿ ಮತ್ತು ಪ್ರತಿವಾದಿ 1 ರಿಂದ 3ರವರು 1 ಎಕರೆ 24 ಗುಂಟೆ ಪೈಕಿ 15 ಗುಂಟೆ ಜಮೀನನ್ನು ವಿ ಪಿ ಶ್ರೀಕಂಠಯ್ಯ ಎಂಬುವವರಿಗೆ 1980ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಇನ್ನುಳಿಕೆ 1 ಎಕರೆ 09 ಗುಂಟೆ ಜಮೀನನ್ನು

ವೆಂಕಟದಾಸಯ್ಯನ ತನ್ನ ನಾಲ್ಕು ಜನ ಮಕ್ಕಳಿಗೆ ತಲಾ 00.07.00 ಗುಂಟೆ ಜಮೀನನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ವೆಂಕಟದಾಸಯ್ಯನ ನಾಲ್ಕು ಜನ ಮಕ್ಕಳಿಗೆ ಸದರಿ ಸ ನಂ.542ರ 1 ಎಕರೆ 09 ಗುಂಟೆ ಜಮೀನಿನ ಪೈಕಿ ತಲಾ 07 ಗುಂಟೆ ಜಮೀನನ್ನು ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿಗೆ ಹಂಚಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಯಾವ ದಿಕ್ಕಿಗೆ ಹಂಚಿಕೊಂಡಿರುತ್ತಾರೆ ಗೊತ್ತಿಲ್ಲ ಎನ್ನುತ್ತಾರೆ.

3. ವೆಂಕಟದಾಸಯ್ಯನ ನಾಲ್ಕು ಜನ ಮಕ್ಕಳು ತಲಾ 7 ಗುಂಟೆಯಂತೆ 28ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದು, ಆ 28 ಗುಂಟೆಯ ಚೆಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವೆಂಕಟೇಶ ಮತ್ತು ಸತ್ಯನಾರಾಯಣನಿಗೆ ಸೇರಿದ ಭೂ ಪರಿವರ್ತನೆಯಾದ ಜಮೀನಿನ ಚೆಕ್ಕುಬಂದಿ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 3ನೇ ಪ್ರತಿವಾದಿ ಮತ್ತು ಆತನ ಸಹೋದರ ತಮಗೆ ಬಂದ ತಲಾ 7 ಗುಂಟೆ ಜಮೀನಿನಲ್ಲಿ ಭೂ ಪರಿವರ್ತನೆ ಮಾಡಿಸಿ ಎಷ್ಟು ಸೈಟ್ ಗಳಾಗಿ ಮಾಡಿದ್ದರು ತಮಗೆ ಗೊತ್ತಾ ಎಂದು ನುಡಿದು, ಸಾಕ್ಷಿ ಮುಂದುವರೆದು 30 ವರ್ಷಗಳ ಹಿಂದೆ ನನ್ನ ತಂದೆ ಖರೀದಿ ಮಾಡಿಸಿಕೊಟ್ಟಿದ್ದು, ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ತಾವು ಸತ್ಯ ನಾರಾಯಣರವರಿಗೆ ಸೇರಿದ ಸೈಟುಗಳಲ್ಲಿ ಎಷ್ಟನೇ ನಂಬರ್ ಸೈಟ್ ನ್ನು ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿ ಸೈಟ್ ನಂ.25/1/2, 27/1, 27/2 ಎಂಬ ನಂಬರಿನ ಸೈಟ್ ಗಳನ್ನು ನನ್ನ ತಂದೆ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ.

4. ಒದೊಂದು ನಿವೇಶನದ ವಿಸ್ತೀರ್ಣ ಎಷ್ಟೆಷ್ಟು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿಗೆ ತಾವು ದಾವಾ ಪತ್ರದಲ್ಲಿ ತೋರಿಸಿರುವ ಚೆಕ್ಕುಬಂದಿ ಭೂ ಪರಿವರ್ತನೆ ಚೆಕ್ಕುಬಂದಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ

ಆಸ್ತಿಯ ಪೂರ್ವ ದಿಕ್ಕಿಗೆ 25 ಅಡಿ ಅಗಲದ ರಸ್ತೆ ಇಲ್ಲದಿದ್ದರೂ ರಸ್ತೆ ಇದೆ ಎಂದು ಸುಳ್ಳು ಚೆಕ್ಕುಬಂದಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಚೆಕ್ಕುಬಂದಿಯನ್ನು ನಮೂದಿಸಿಕೊಂಡು ಸುಳ್ಳು ದಾವೆ ತಂದಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಗ್ರಾಮ ಪಂಚಾಯಿತಿ ದಾಖಲಾತಿಗಳು ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡಿರುವ ದಾಖಲೆಗಳು ಎಂದರೆ ಸರಿಯಲ್ಲ.

5. ಸ ನಂ.542ರಲ್ಲಿ ಉಳಿದ 19 ಗುಂಟೆ ಜಮೀನನ್ನು ಪ್ರತಿವಾದಿ 1 ರಿಂದ 3ರವರ ತಾಯಿ ಚೆನ್ನಮ್ಮ ರವರ ಹೆಸರಿಗೆ 19 ಗುಂಟೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿ 1 ರಿಂದ 3 ಮತ್ತು ಅವರ ತಾಯಿ ತಲಾ 4 ಗುಂಟೆಯಂತೆ ಹಂಚಿಕೊಂಡು 00.01.00 ಗುಂಟೆ ಜಮೀನನ್ನು ಪ್ರತಿವಾದಿ 1 ರಿಂದ 3ರವರ ಸಹೋದರಿ ವೈಶಾಖರವರ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 3 ಅವರ ತಾಯಿ ತಲಾ 4 ಗುಂಟೆ ಹಂಚಿಕೊಂಡಿರುವ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿ ದಾಖಲೆ ನೋಡಿಲ್ಲ ಕೇಳಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 3ರವರ ತಾಯಿ ಹೆಸರಿಗೆ 19 ಗುಂಟೆ ಖಾತೆ ಆಗಿದ್ದನ್ನು ನಾನು ಮತ್ತು ಇನ್ನಿತರರು ಸದರಿ ಖಾತೆಯನ್ನು ರದ್ದು ಮಾಡುವಂತೆ ರಾಮನಗರ ಉಪ ವಿಭಾಗಾಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ. ಚೆನ್ನಮ್ಮನ ಹೆಸರಿಗೆ ಇರುವ ಸದರಿ 19 ಗುಂಟೆ ವಿಸ್ತೀರ್ಣದ ಖಾತೆಯನ್ನು ರದ್ದು ಮಾಡಲು ಆದೇಶ ಆಗಿಲ್ಲ ಎಂದರೆ ಸಾಕ್ಷಿಯು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸದರಿ ಖಾತೆಯನ್ನು ವಜಾ ಮಾಡುವಂತೆ ತಹಶೀಲ್ದಾರ್ ಚನ್ನಪಟ್ಟಣ ರವರಿಗೆ ಆದೇಶ ಮಾಡಿದ್ದು ತಹಶೀಲ್ದಾರ್ ಚನ್ನಪಟ್ಟಣ ಇವರು ಖಾತೆಯನ್ನು ವಜಾ ಮಾಡಿಲ್ಲ ಎನ್ನುತ್ತಾರೆ. ಜಿಲ್ಲಾಧಿಕಾರಿಯವರಿಂದ ಖಾತೆ ವಜಾ ಮಾಡಲು ಯಾವುದೇ ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿ, ರಾಮನಗರ ರವರ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮುಂದು ಹಾಜರುಪಡಿಸುತ್ತೇನೆ ಎನ್ನುತ್ತಾರೆ.

6. 19 ಗುಂಟೆಯ ಪೂರ್ವಕ್ಕೆ ಇರುವ ಆಸ್ತಿಯು ಭೂ ಪರಿವರ್ತನೆ ಆಗಿದೆಯೇ ಹೊರತು 19 ಗುಂಟೆಯಲ್ಲಿ ಭೂ ಪರಿವರ್ತನೆ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಚೆನ್ನಮ್ಮನ ಹೆಸರಿಗೆ ಇರುವ ಜಮೀನು ಭೂ ಪರಿರ್ವತನೆ  ಆಗಿಲ್ಲ ಬದಲಿಗೆ ದಾವಾ ಆಸ್ತಿಯಲ್ಲಿರುವ ಚೆಕ್ಕುಬಂದಿಯನ್ನು ನಮೂದಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3ರವರ ತೊಂದರೆ ಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ